## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಶ್ರೀ ಎಂ.ಆರ್ ಪ್ರದೀಪ್, ಅಂದಿನ ಅಧ್ಯಕ್ಷರು, ನರಸಾಪುರ ಗ್ರಾಮ ಪಂಚಾಯತಿ, ಶಿಕಾರಿಪುರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ. ಇವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕರಣ 43(ಎ) ರನ್ವಯ ಕ್ರಮ ಜರುಗಿಸುವ ಬಗ್ಗೆ.

ಓದಲಾಗಿದೆ:

1) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತಿ ಶಿವಮೊಗ್ಗ ಇವರ ಪತ್ರ ಸಂಖ್ಯೆ:ಜಿಪಂಶಿ/ಯೋಶಾ/ವಿನಿ-5/ವಿವ-11/2018-2019 ದಿನಾಂಕ:04.07.2018
2) ಶ್ರೀ ಎಂ.ಆರ್ ಪ್ರದೀಪ್, ಅಂದಿನ ಅಧ್ಯಕ್ಷರು, ನರಸಾಪುರ ಗ್ರಾಮ ಪಂಚಾಯತಿ, ಶಿಕಾರಿಪುರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ ಇವರ ಲಿಖಿತ ಹೇಳಿಕೆ ದಿನಾಂಕ: 14.08.2018

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮಾಂಕ (1)ರಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತಿ ಶಿವಮೊಗ್ಗ ಇವರು ಪೋಲಿಸ್ ಇನ್ಸ್‌ಪೆಕ್ಟರ್, ಭ್ರಷ್ಟಾಚಾರ ನಿಗ್ರಹ ದಳ, ಶಿವಮೊಗ್ಗ ಇವರ ದಿನಾಂಕ:15.06.2018 ರ ಪತ್ರದಲ್ಲಿ ಶ್ರೀ ಎಂ. ಆರ್. ಪ್ರದೀಪ್, ಅಧ್ಯಕ್ಷರು, ನರಸಾಪುರ ಗ್ರಾಮ ಪಂಚಾಯತಿ, ಶಿಕಾರಿಪುರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ ಇವರನ್ನು ದಿನಾಂಕ:14.06.2018 ರಂದು ರಾತ್ರಿ ಭಷ್ಟಾಚಾರ ನಿಗ್ರಹ ದಳ ಪೋಲೀಸ್‌ನವರು ದಸ್ತಗಿರಿ ಮಾಡಿ, ಘನ ಜಿಲ್ಲಾ ಮತ್ತು ಸತ್ರ ಹಾಗೂ ವಿಶೇಷ ನ್ಯಾಯಧೀಶರು, ಶಿವಮೊಗ್ಗ ರವರ ಮುಂದೆ ಹಾಜರುಪಡಿಸಿದ್ದು, ದಿನಾಂಕ:22.06.2018 ರಂದು ಘನ ನ್ಯಾಯಾಲಯವು ಜಾಮೀನು ಮಂಜೂರು ಮಾಡಲಾಗಿರುತ್ತದೆ. ಪ್ರಕರಣದ ಕುರಿತಾಗಿ ಆಪಾದಿತರು ರೂ.20,000/- ಲಂಚದ ಹಣ ಸ್ವೀಕರಿಸುವಾಗ ಟ್ರಾಪ್ ಆಗಿದ್ದು, ತನಿಖಾ ಕಾಲದಲ್ಲಿ ಸಾಬೀತಾಗಿರುತ್ತದೆ. ಇವರು ಚುನಾಯಿತ ಪ್ರತಿನಿಧಿಯಾಗಿದ್ದು, ಈಗಿರುವ ಸ್ಥಾನದಲ್ಲಿ ಮುಂದುವರೆಯಲು ಬಿಟ್ಟರೆ ಅಧಿಕಾರ ದುರುಪಯೋಗಪಡಿಸಿಕೊಂಡು ಸಾಕ್ಷಿದಾರರ ಮೇಲೆ ಪ್ರತಿಕೂಲ ಪ್ರಭಾವ ಬೀರುವ ದಾಖಲಾತಿಗಳನ್ನು ತಿದ್ದುಪಡಿ ಮಾಡುವ ಮತ್ತು ಈ ಮೂಲಕ ತನಿಖೆಗೆ ಬಾಧಕವಾಗುವ ಸಾಧ್ಯತೆ ಇರುತ್ತದೆಯೆಂದು ತಿಳಿಸಿ, ಸದರಿಯವರನ್ನು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 43(ಎ) ಮತ್ತು 48(4) ರನ್ವಯ ಗ್ರಾಮ ಪಂಚಾಯತಿ ಅಧ್ಯಕ್ಷರು ದುರ್ನಡತೆ ಮತ್ತು ಕರ್ತವ್ಯ ನಿರ್ವಹಣೆ ಮಾಡುವಲ್ಲಿ ತಪ್ಪಿತಸ್ಥರಾಗಿರುತ್ತಾರೆಂದು ಸರ್ಕಾರಕ್ಕೆ ಶಿಫಾರಸ್ಸು ಮಾಡಿರುತ್ತಾರೆ.

ಈ ಪ್ರಕರಣವನ್ನು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 48(4) & 48(5) ರಡಿಯಲ್ಲಿ ದಾಖಲಿಸಿಕೊಳ್ಳಲಾಯಿತು ಮತ್ತು ಆರೋಪಿತ ಅಧ್ಯಕ್ಷರಿಗೆ ಸದರಿ ಪ್ರಕರಣದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾಪಂಚಾಯತಿ, ಶಿವಮೊಗ್ಗ ಜಿಲ್ಲೆ ಇವರು ಸರ್ಕಾರಕ್ಕೆ ಸಲ್ಲಿಸಿರುವ ಪ್ರಸ್ತಾವನೆಯನ್ನು ಲಗತ್ತಿಸಿ, ದಿನಾಂಕ:27.07.2018ರಂದು ಕಾರಣ ಕೇಳುವ ನೋಟೀಸನ್ನು ಜಾರಿಗೊಳಿಸಿ, 15 ದಿನಗಳ ಒಳಗಾಗಿ ಸಮಜಾಯಿಷಿಯನ್ನು ಸಲ್ಲಿಸುವಂತೆ ತಿಳಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರಮಾಂಕ (2)ರಲ್ಲಿ ಶ್ರೀ ಎಂ.ಆರ್ ಪ್ರದೀಪ್, ಅಂದಿನ ಅಧ್ಯಕ್ಷರು, ನರಸಾಪುರ ಗ್ರಾಮ ಪಂಚಾಯತಿ, ಶಿಕಾರಿಪುರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ. ಇವರ ಲಿಖಿತ ಹೇಳಿಕೆಯಲ್ಲಿ ನನ್ನ ಮೇಲೆ ಮಾಡಿರುವ ಆಪಾದನೆಯನ್ನು ನಾನು ಸಾರಾಸಗಟಾಗಿ ತಿರಸ್ಕರಿಸಿರುತ್ತೇನೆ. ನಾನು ರೂ.20,000/-ಗಳ ಲಂಚದ ಹಣವನ್ನು

ಸ್ವೀಕರಿಸಿರುತ್ತೇನೆ ಎಂಬ ಆರೋಪವು ಸತ್ಯಕ್ಕೆ ದೂರವಾದುದು, ಈ ವಿಷಯಕ್ಕೆ ಸಂಬಂಧಿಸಿದಂತೆ ಕಣಸೋಗಿ ಗ್ರಾಮದ ಹನುಮಂತಪ್ಪ ಹುಬ್ಬಳ್ಳಿ ಮನೆಯಿಂದ ಗುತ್ಯಪ್ಪ ಹಿಂದಿನ ಈ ಮನೆಯವರಿಗೆ ಎಂ.ಜಿ.ಎನ್.ಆರ್.ಇ.ಜಿ. ಯೋಜನೆಯಲ್ಲಿ ರೂ. 5.00 ಲಕ್ಷ ಸಿಮೆಂಟ್ ರಸ್ತೆ ನಿರ್ಮಾಣ ಕಾಮಗಾರಿಯನ್ನು ಮಲ್ಲಪ್ಪ ಎಂ.ವಿ. ತಂದೆ ವೀರಭದ್ರಪ್ಪ, ಎಂಬ ಗುತ್ತಿಗೆದಾರ (ಮಟೀರಿಯಲ್ ಸಪ್ಲೇಯರ್) ನಾಗಿದ್ದು ಈ ಕಾಮಗಾರಿಯ ಎನ್.ಎಂ.ಆರ್.ಪೇಮೆಂಟ್ ದಿನಾಂಕ:29.08.17, 14.09.17 ಮತ್ತು 15.09.17ಗಳಂದು ಹಾಕಿರುತ್ತೇವೆ ನಂತರದಲ್ಲಿ ಸಾಮಾಗ್ರಿಯ ಮೊತ್ತ ದಿನಾಂಕ:31.10.17 ರಂದು ಮಲ್ಲಪ್ಪ ಎಂ.ವಿ.ರವರಿಗೆ ರೂ.2,62,930/- (ಎರಡು ಲಕ್ಷದ ಅರವತ್ತೆರಡು ಸಾವಿರದ ಒಂಬೈನೂರು ರೂಪಾಯಿ ರೂ) ಹಣ ನೀಡಿರುತ್ತೇವೆ. ಉಳಿದ ರೂ.1,49,315 (ಒಂದು ಲಕ್ಷದ ನಲವತ್ತೊಂಭತ್ತು ಸಾವಿರ ಮುನ್ನೂರ ಹದಿನೈದು ರೂ) ಬಾಕಿ ಇರುತ್ತದೆ ನಂತರದಲ್ಲಿ ದಿನಾಂಕ:10.04.18 ರಿಂದ ವಿಧಾನ ಸಭೆ ಚುನಾವಣೆ ನಂತರ ಪದವೀದರ ಕ್ಷೇತ್ರದ ಚುನಾವಣೆ ದಿನಾಂಕ:20.06.18 ರಿಂದ ನೀತಿ ಸಂಹಿತೆ ಇರುವುದರಿಂದ ಮಲ್ಲಪ್ಪನವರಿಗೆ ಉಳಿದ ಬಾಕಿ ಹಣ ಪಾವತಿಸಲು ಸಾಧ್ಯವಾಗಲಿಲ್ಲ ಹಾಗೂ ನರಸಾಪುರ ಗ್ರಾಮ ಪಂಚಾಯಿತಿಯಲ್ಲಿ 2 ವರ್ಷದಿಂದ ಇಂಟರ್ ನೆಟ್, ಬ್ರಾಡ್ ಬ್ಯಾಂಡ್ ಸರಿ ಇಲ್ಲದಿರುವುದಿಲ್ಲ ಪಕ್ಕದ ಬಿಳಿಕಿ ಗ್ರಾಮ ಪಂಚಾಯಿತಿ ತಾಳಗುಂದ ಗ್ರಾ.ಪಂ. ಬಳ್ಳಿಗಾವಿ ಈ ಪಂಚಾಯಿತಿಗಳಿಗೆ ಹೋಗಿ ಇದುವರೆಗಿನ ಕಾಮಗಾರಿಗಳ ಎನ್.ಎಂ.ಆರ್. ಪೇಮೆಂಟ್‌ನ್ನು ಫಲಾನುಭವಿಗಳಿಗೆ ಹಾಕಿರುತ್ತೇವೆ. ಬಿ.ಎಸ್.ಎನ್.ಎಲ್. ಹಾಗೂ ಜಿಲ್ಲಾ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ತಾಲ್ಲೂಕು ಹಾಗೂ ಜಿಲ್ಲಾಧಿಕಾರಿಗಳು, ಮಾನ್ಯ ಮುಖ್ಯ ಮಂತ್ರಿಗಳಿಗೂ ಈ ವಿಷಯವನ್ನು ತಿಳಿಸಿರುತ್ತೇವೆ ಈ ಕಾರಣಗಳಿಂದ ಉಳಿದ ಹಣವನ್ನು ಪಾವತಿಸಲು ಸಾಧ್ಯವಾಗಿರುವುದಿಲ್ಲ.

ಶ್ರೀ ವೀರೇಶ್ ಎಂಬ ಹೆಸರಿನ ವ್ಯಕ್ತಿಯು ಭ್ರಷ್ಟಾಚಾರ ನಿಗ್ರಹದಳ ಪೊಲೀಸ್ ಠಾಣೆ, ಶಿವಮೊಗ್ಗದಲ್ಲಿ ಈ ಹಿಂದೆ ದಿನಾಂಕ:14.06.18 ರಂದು ವಿನಾಕಾರಣ ನಮ್ಮ ಮೇಲೆ ದೂರನ್ನು ನೀಡಿರುತ್ತಾರೆ. ವೀರೇಶ್ ತಂದೆ ರುದ್ರಪ್ಪ ಎಂಬ ವ್ಯಕ್ತಿಯು ನರಸಾಪುರ ಗ್ರಾಮ ಪಂಚಾಯಿತಿಯಲ್ಲಿ ಈವರೆಗೂ ಯಾವುದೇ ಕಾಮಗಾರಿಯನ್ನು ಮಾಡಿರುವುದಿಲ್ಲ ಹಾಗೂ ಅವರು ಯಾವುದೇ ಪರವಾನಗಿ (ಲೈಸನ್ಸ್) ಈ ವರೆಗೂ ಹೊಂದಿರುವುದಿಲ್ಲ. ರಾಜಕೀಯ ದುರುದ್ದೇಶದಿಂದ ಈ ರೀತಿ ಆಪಾದನೆಯನ್ನು ಮಾಡಿರುತ್ತಾರೆ. ನಾವು ಯಾವುದೇ ತಪ್ಪನ್ನು ಮಾಡಿರುವುದಿಲ್ಲ ಈ ಹಿಂದೆ 5 ವರ್ಷ ಸದಸ್ಯನಾಗಿ ಹಾಗೂ ಈಗ ಅಧ್ಯಕ್ಷನಾಗಿ ಕೆಲಸ ಮಾಡುತ್ತಿದ್ದು ಹಾಗೂ ಗುತ್ತಿಗೆದಾರರ ಹಾಗೂ ಸಾರ್ವಜನಿಕರ ಕೆಲಸಗಳನ್ನು ನಿಷ್ಠೆಯಿಂದ ನಡೆಸಿಕೊಂಡು ಬಂದಿರುತ್ತೇನೆ ಇದನ್ನು ಸಹಿಸಲಾಗದೆ ವಿನಾಕಾರಣ ನಮ್ಮ ಮೇಲೆ ಸುಳ್ಳು ಆರೋಪವನ್ನು ಮಾಡಿರುತ್ತಾರೆ. ಇದಕ್ಕೆ ಸಂಬಂಧಪಟ್ಟಂತೆ ದಾಖಲಾತಿಗಳನ್ನು ನೀಡಿರುತ್ತೇನೆ.

ಈ ಎಲ್ಲಾ ಅಂಶಗಳನ್ನು ಪರಿಶಿಲಿಸಲಾಗಿ, ಆಪಾದಿತ ಅಧ್ಯಕ್ಷರು, ರೂ.20,000/-ಗಳ ಲಂಚದ ಹಣ ಪಡೆಯುವಾಗ ಟ್ರ್ಯಾಪ್‌ಆಗಿರುವ ಬಗ್ಗೆ ಯಾವುದೇ ಮಾಹಿತಿ/ದಾಖಲೆಗಳು ಮತ್ತು ಹೇಳಿಕೆಯು ನೀಡದೇ ಇರುವುದರಿಂದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಶಿವಮೊಗ್ಗ ಇವರು ಮತ್ತು ಭ್ರಷ್ಟಾಚಾರ ನಿಗ್ರಹ ದಳ ನೀಡಿರುವ ವರದಿಗೆ ಹೊಂದಾಣಿಕೆಯಾಗುತ್ತಿರುವುದಿಲ್ಲ. ಆದುದರಿಂದ ಶ್ರೀ ಎಂ.ಆರ್. ಪ್ರದೀಪ್, ಅಂದಿನ ಅಧ್ಯಕ್ಷರು, ನರಸಾಪುರ ಗ್ರಾಮ ಪಂಚಾಯತಿ, ಶಿಕಾರಿಪುರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ ರವರ ಕರ್ತವ್ಯ ನಿರ್ವಹಣೆಯಲ್ಲಿ ಹಾಗೂ ದುರ್ನಡತೆ ಮತ್ತು ಅವ್ಯವಹಾರ ನಡೆದಿರುವುದು ಸಾಬೀತಾಗಿರುವುದರಿಂದ ಇವರನ್ನು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮದ 1993ರ ಪ್ರಕರಣ 43(ಎ) ರಡಿ ಸದಸ್ಯತ್ವ ಸ್ಥಾನದಿಂದ ತೆಗೆದು ಹಾಕಲು ಸರ್ಕಾರವು ನಿರ್ಣಯಿಸಿದೆ.

ಅದರಂತೆ ಈ ಕೆಳಕಂಡ ಆದೇಶ.

**<u>ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 701 ಗ್ರಾಪಂಅ 2018 ಬೆಂಗಳೂರು, ದಿನಾಂಕ:11.02.2020</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಭಷ್ಟಾಚಾರ ನಿಗ್ರಹ ದಳ, ಶಿವಮೊಗ್ಗ ಇವರ ತನಿಖಾ ವರದಿಯಲ್ಲಿ ಶ್ರೀ ಎಂ.ಆರ್. ಪ್ರದೀಪ್, ಅಂದಿನ ಅಧ್ಯಕ್ಷರು, ನರಸಾಪುರ ಗ್ರಾಮ ಪಂಚಾಯತಿ, ಶಿಕಾರಿಪುರ ತಾಲ್ಲೂಕು,

ಶಿವಮೊಗ್ಗ ಜಿಲ್ಲೆ ಇವರು ಲಂಚದ ಹಣ ಸ್ವೀಕರಿಸುವಾಗ ಟ್ರ್ಯಾಪ್ ಆಗಿರುವುದು ಮತ್ತು ಅವರ ಕರ್ತವ್ಯ ನಿರ್ವಹಣೆ, ದುರ್ನಡತೆ ಮತ್ತು ಅವ್ಯವಹಾರ ನಡೆದಿರುವುದು ಸಾಬೀತಾಗಿರುವುದರಿಂದ ಶ್ರೀ ಎಂ.ಆರ್. ಪ್ರದೀಪ್, ಅಂದಿನ ಅಧ್ಯಕ್ಷರು, ನರಸಾಪುರ ಗ್ರಾಮ ಪಂಚಾಯತಿ, ಶಿಕಾರಿಪುರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ ಇವರನ್ನು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮದ 1993ರ ಪ್ರಕರಣ 43(ಎ)ರನ್ವಯ ನರಸಾಪುರ ಗ್ರಾಮ ಪಂಚಾಯತಿಯ ಸದಸ್ಯತ್ವ ಸ್ಥಾನದಿಂದ ತಕ್ಷಣ ಜಾರಿಗೆ ಬರುವಂತೆ ತೆಗೆದು ಹಾಕಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

B. Naveenkumar 11/02/2020
(ನವೀನ್ ಕುಮಾರ್. ಬಿ)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,(ಗ್ರಾ.ಪಂ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

<u>ಇವರಿಗೆ</u>

1) ಜಿಲ್ಲಾಧಿಕಾರಿಗಳು, ಶಿವಮೊಗ್ಗ ಜಿಲ್ಲೆ.
2) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ ಶಿವಮೊಗ್ಗ ಜಿಲ್ಲೆ.
3) ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ-ಶಿಕಾರಿಪುರ,-ಶಿವಮೊಗ್ಗ ಜಿಲ್ಲೆ.
4) ಪಂಚಾಯತಿ ಅಭಿವೃದ್ಧಿ ಅಧಿಕಾರಿ, ನರಸಾಪುರ ಗ್ರಾಮ ಪಂಚಾಯತಿ, ಶಿಕಾರಿಪುರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.
5) ಶ್ರೀ ಎಂ.ಆರ್. ಪ್ರದೀಪ್, ಅಂದಿನ ಅಧ್ಯಕ್ಷರು, ನರಸಾಪುರ ಗ್ರಾಮ ಪಂಚಾಯತಿ, ಶಿಕಾರಿಪುರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ **(ಇವರಿಗೆ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ ಶಿಕಾರಿಪುರ, ಶಿವಮೊಗ್ಗ ಜಿಲ್ಲೆ ಇವರ ಮುಖಾಂತರ)**

<u>ಪ್ರತಿಯನ್ನು ಮಾಹಿತಿಗಾಗಿ:</u>

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ(ಪಂ.ರಾಜ್) ಇವರ ಆಪ್ತ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಗಣಕ ಕೋಶ.
4. ಕಛೇರಿ ಪ್ರತಿ/ಹೆಚ್ಚುವರಿ ಪ್ರತಿ.